ನಬಾರ್ಡ್ ಯೋಜನೆಯಡಿಯಲ್ಲಿ ಪಿಡಬ್ಲ್ಯೂಡಿ ಇಲಾಖೆಗೆ ಬರಬೇಕಾದ ಹಣ

537 (917) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1996-97, 97-98 ಮತ್ತು 98-99ನೇ ಸಾಲುಗಳಲ್ಲಿ ನಬಾರ್ಡ್ ಯೋಜನೆಯಡಿ ಪಿ.ಡಬ್ಲ್ಯು.ಡಿ. ಇಲಾಖೆಗೆ ಬಂದ ಅಥವಾ ಬರಬೇಕಾದ ಮೊತ್ತವೆಷ್ಟು?

ಆ) ನಬಾರ್ಡ್ ಯೋಜನೆ ಹಣ ವ್ಯಯಕ್ಕಾಗಿರುವ ನಿಬಂಧನೆಗಳು ಏನು? ಅದರಂತೆ ಹಣ ವಿನಿಯೋಗಿಸಲಾಗಿದೆಯೆ?

ಇ) ಯೋಜನೆಯಲ್ಲಿ ಜಿಲ್ಲಾವಾರು ನಿಯೋಜಿಸಿದ ಮತ್ತು ಖರ್ಚು ಮಾಡಿದ ಹಣದ ಮೊತ್ತವೆಷ್ಟು?

ಈ) ಜಿಲ್ಲೆ ಜಿಲ್ಲೆಗೂ ಹೆಚ್ಚಿನ ತಾರತಮ್ಯವಿದ್ದರೆ ಅದಕ್ಕೆ ಕಾರಣವೇನು?

ಶ್ರೀ ಉಮೇಶ್.ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ)

ವರ್ಷ	ಅಂದಾಜುಮೊತ್ತ (ಕೋಟಿ)	ಸಾಲ ಸಹಾಯ (ಕೋಟಿ ರೂ.)
1996-97	133.00	122.00
1997-98	157.20	138.00
1998-99 (ಈ ವರೆಗೆ)	22.61	20.36

ಆ) ಒಪ್ಪಿತವಾದ ಕಾಮಗಾರಿಗಳನ್ನು ಮೊದಲಿಗೆ ರಾಜ್ಯ ಸರ್ಕಾರದ ಹಣದಿಂದ ತೆಗೆದುಕೊಂಡು ವೆಚ್ಚ ಮಾಡಿ, ನಂತರ ಮಾಡಿದ ವೆಚ್ಚದ ಶೇ.90% ರಷ್ಟು ಭಾಗವನ್ನು ನಬಾರ್ಡ್‌ನಿಂದ ಸಾಲ ಮರುಪಾವತಿ ಪಡೆಯಬೇಕಿದೆ.

ಇ) ಜಿಲ್ಲಾವಾರು ಒಪ್ಪಿತವಾದ ಕಾಮಗಾರಿಗಳ ಮೊತ್ತ ಹಾಗೂ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ನಬಾರ್ಡ್ ಸಂಸ್ಥೆಯು ಅದರ ನಿಯಮಾವಳಿ ಗೊಪ್ಪುವಂತಹ ಕಾಮಗಾರಿಗಳಿಗೆ ಅನುಮೋದನೆ ನೀಡುವುದರಿಂದ ಎಲ್ಲಾ ಜಿಲ್ಲೆಗಳಲ್ಲಿ ಸಮವಾಗಿ ಮಂಜೂರಾಗಿವುದಿಲ್ಲ.